# ಜಲಾಲುದ್ದೀನ್ ರೂಮಿ

'ಯಾವುದು ನೋಯಿಸುತ್ತದೋ ಅದು ಹರಸುತ್ತದೆ/ ಕತ್ತಲೆ ನಿನ್ನನ್ನು ಬೆಳಗುವ ಮೋಂಬತ್ತಿಯ ಬೆಳಕು.'

ಈ ಸಾಲುಗಳು ಸೂಫಿಕವಿ ಮೌಲಾನಾ ಜಲಾಲುದ್ದೀನ್ ರೂಮಿಯ ಕಾವ್ಯಕ್ಕೆ ಸೇರಿವೆ. ಒಂದು ಕಾಲದಲ್ಲಿ ಅನುಭಾವಿಗಳ ಸೊತ್ತಾಗಿದ್ದ ರೂಮಿಯನ್ನು ಇಂದು ಯುವ ಓದುಗರು ಆರಾಧಿಸುತ್ತಾರೆ ಎನ್ನುವುದು ಅವನ ಕಾವ್ಯಕ್ಕೆ ಸಲ್ಲುವ ಗೌರವವಾಗಿದೆ. ಪಾಶ್ಚಾತ್ಯ ಅನುಭಾವದ ಬಗ್ಗೆ ಮಾತನಾಡುವವರೂ ರೂಮಿಯನ್ನು ಬಿಟ್ಟು ಮಾತನಾಡಲು ಆಗುವುದಿಲ್ಲ. ಇದು ಹೇಗೆಂದರೆ ಕರ್ನಾಟಕದ ಅನುಭಾವ ಸಾಹಿತ್ಯವನ್ನು ಮಾತನಾಡುವಾಗ ವಚನವನ್ನು ಬಿಟ್ಟು ಹೇಗೆ ಮಾತನಾಡಲಾಗುವುದಿಲ್ಲವೋ ಹಾಗೆ. ಭಕ್ತ ಮತ್ತು ದೈವದ ನಡುವೆ ಸಂವಾದ ನಡೆಸಬಲ್ಲ ಮಾಧ್ಯಮವೆಂದರೆ ಭಕ್ತಿ ಮಾತ್ರ. ಈ ಖಾಸಗಿ ಜಗತ್ತನ್ನೇ ಅನುಭಾವ ಲೋಕ, ಭಕ್ತನನ್ನೇ ಅನುಭಾವಿ ಎನ್ನಲಾಗುತ್ತದೆ. ಸೂಫಿಯೆಂಬ ಅನುಭಾವ ಸಾಹಿತ್ಯದಲ್ಲಿಯೂ ಇದೇ ರೀತಿಯ ವಿವರಣೆಗೆ ಸಿಗದ ಖಾಸಗಿ ಜಗತ್ತೊಂದು ಅನುಭಾವದ ಹಂತದಲ್ಲಿ ಬಿಚ್ಚಿಕೊಳ್ಳುತ್ತದೆ.

ರೂಮಿಯ ಕಾವ್ಯವೆಂದರೆ ನಮ್ಮ ಕಣ್ಣಮುಂದೆ ಬಿಚ್ಚಿಕೊಳ್ಳುವುದು, ಬಿಳಿಯ ವಸ್ತ್ರದೊಂದಿಗೆ ತನ್ನೊಳಗೆ ತಾನೇ ಮುಳುಗಿ ಗಿರಗಿರನೆ ಲಯಬದ್ಧವಾಗಿ ತಿರುಗುವ ಒಬ್ಬ ಸೂಫಿಯ ನರ್ತನ. ಹಲವಾರು ನರ್ತಕರು ಲೋಕದ ಹಂಗು ತೊರೆದು ನರ್ತಿಸುವ ರೀತಿ 'ನನ್ನೊಳಗ ನಾನು ಕಂಡುಕೊಂಡೆ, ಬೇಕಾದ ಗಂಡನ್ನ ಮಾಡಿಕೊಂಡೆ' ಎನ್ನುವ ಶಿಶುನಾಳ ಶರೀಫನನ್ನು ನೆನಪಿಸುತ್ತದೆ. ಇವು ಲೌಕಿಕದ ಧಾರ್ಮಿಕ ಕಟ್ಟುಪಾಡು, ಆಚರಣೆಗಳಿಂದಾಚೆ ಪಾರಾಗಲೆತ್ನಿಸುವ ಸೂಫಿಯೊಬ್ಬನ ತೀವ್ರ ಕ್ಷಣಗಳು. ಇವು ಶಾಂತ ಕದಳಿವನದಲ್ಲಿ ಚೆನ್ನಮಲ್ಲಿಕಾರ್ಜುನನ ಕಂಡುಕೊಂಡ ಅಕ್ಕನ ತೀವ್ರ ಖಾಸಗಿ ಕ್ಷಣಗಳು. ಇವು ಕೂಡಲಸಂಗಮನನ್ನು ಅನವರತ ಧ್ಯಾನಿಸುವ, ಹೊಂದಲು ಬಯಸುವ ಬಸವನ ಅಂತರಂಗದ ಮೊರೆಗಳು. ಇಂತಹ ತೀವ್ರ ಕ್ಷಣಗಳಲ್ಲಿಯೇ ಬಸ್ರಾದ ರಾಬಿಯ ಕೂಡ ಹಗಲಲ್ಲಿ ಜೀತ ಮಾಡುತ್ತಾ ಮರಳುಗಾಡಲ್ಲಿ ದೈವವನ್ನು ಆರಾಧಿಸುತ್ತಿದ್ದಳು.

ಕ್ರಿ.ಶ. 12ನೇ ಶತಮಾನದಲ್ಲಿದ್ದ ರೂಮಿಯ ತಂದೆ ಬಹಾವುದ್ದೀನ್ ವಲಾದ್ ಪಂಡಿತನಾಗಿದ್ದು ಧಾರ್ಮಿಕತೆಯ ಬೋಧನೆಗಳನ್ನ ಬೋಧಿಸುವ ಮುಖ್ಯಸ್ಥನಾಗಿದ್ದ. ಸೂಫಿಯಿಜಂ ಬಲ್ಲವನಾಗಿದ್ದ. ಪಂಡಿತನಾಗಿದ್ದ ಅವನ ಪ್ರಸಿದ್ಧಿಯನ್ನು ಕಂಡ ಆ ವಂಶದ ರಾಜ ತೊಂದರೆಗಳನ್ನು ಕೊಡುತ್ತಿದ್ದ. ಅಷ್ಟರಲ್ಲಿ ಮಂಗೋಲರ ದಾಳಿ ತಾವು ವಾಸಿಸುತ್ತಿದ್ದ ಬಾಲ್ಕಿಯ ಮೇಲೆ ನಡೆಯುವ ಮುನ್ಸೂಚನೆ ಅರಿತ ಬಹಾವುದ್ದೀನ್ ತನ್ನ ಕುಟುಂಬದ ಸಮೇತ ಮೆಕ್ಕಾಕ್ಕೆ ತೀರ್ಥಯಾತ್ರೆ ಹೊರಡುತ್ತಾನೆ. ಈ ಸಂದರ್ಭದಲ್ಲಿ ರೂಮಿ ಗಣಿತ, ಚರಿತ್ರೆ, ದರ್ಶನಶಾಸ್ತ್ರ, ತರ್ಕಶಾಸ್ತ್ರ, ಅರೇಬಿಕ್, ಖುರಾನ್, ಹದಿಯಸ್‌ನಲ್ಲಿ ಪಾಂಡಿತ್ಯ ಗಳಿಸಿಕೊಳ್ಳುತ್ತಾನೆ. ಕೊನ್ಯಾ ನಗರಕ್ಕೆ ರಮ್ ಎನ್ನುವ ಹೆಸರಿದ್ದು, ರೂಮಿ ತನ್ನ ಹೆಸರಿಗೆ ಅದನ್ನು ಸೇರಿಸಿಕಂಡು ಜಲಾಲುದ್ದೀನ್ ರೂಮಿ ಆಗುತ್ತಾನೆ. ತಂದೆಯ ಮರಣಾನಂತರ ಅದೇ ಮದರಸಾದಲ್ಲಿ ಮೌಲ್ವಿಯಾದ ನಂತರ ಮೌಲಾನ ಜಲಾಲುದ್ದೀನ್ ರೂಮಿಯಾಗಿ ಹೆಸರು ಪಡೆಯುತ್ತಾನೆ.

ಮೌಲ್ವಿಯಾದಾಗ ರೂಮಿಗೆ 24ರ ವಯಸ್ಸು. ಅವರ ತಂದೆಯ ಹಿರಿಯ ಶಿಷ್ಯನಾದ ಸಯ್ಯದ್ ಬುರ್ಹಾನ್ ರೂಮಿಗೆ ಗುರುವಾಗುತ್ತಾನೆ. ಹೀಗೇ ಹಲವು ದಿಕ್ಕಿನಲ್ಲಿ ವಿದ್ಯಾಪಾರಂಗತನಾದ ರೂಮಿಯ ಬದುಕು ಯಶಸ್ವಿಯ ಹಾದಿಯಲ್ಲಿತ್ತು. ಅವನಿಗೆ 18ನೇ ವಯಸ್ಸಿಗೇ ಮದುವೆಯಾಗಿ ಎರಡು ಮಕ್ಕಳಿದ್ದರು. ಮೊದಲನೆಯ ಹೆಂಡತಿ ತೀರಿಹೋದಾಗ ಒಬ್ಬ ವಿಧವೆ ಮದುವೆಯಾಗಿ ಎರಡು ಮಕ್ಕಳನ್ನು ಪಡೆಯುತ್ತಾನೆ.

ರೂಮಿಯ ಬದುಕಿನ ಎರಡನೇ ಘಟ್ಟ ಆರಂಭವಾಗಿದ್ದು ಶಂಸ್–ತಬ್ರಿಜ್‌ನ ಭೇಟಿಯ ನಂತರ. ಶಂಸ್ ಇರಾನಿನ ತಬ್ರಿಜ್ ಎಂಬ ಭಾಗಕ್ಕೆ ಸೇರಿದ ಪರ್ಶಿಯನ್ ಕವಿ. ಒಂದು ದಿನ 38 ವರ್ಷದ ರೂಮಿ ಹಾಗೂ 60 ವರ್ಷದ ಶಂಸ್ ಭೇಟಿಯಾಗುತ್ತಾರೆ. ಆ ಭೇಟಿಯಾಗದಿದ್ದರೆ ರೂಮಿ ಇಂದು ಕವಿಯಾಗುತ್ತಿರಲಿಲ್ಲ. ಪುಸ್ತಕಗಳನ್ನು ಓದುತ್ತಿದ್ದ ರೂಮಿಯನ್ನು ನೋಡಿ ಶಂಸ್ 'ಏನು ಮಾಡುತ್ತಿರುವೆ' ಎಂದು ಪ್ರಶ್ನಿಸುತ್ತಾನೆ. ರೂಮಿ ಉದಾಸೀನದಿಂದ 'ನಾನು ಮಾಡುತ್ತಿರುವುದು ನಿನಗೆ ಅರ್ಥವಾಗುವುದಿಲ್ಲ' ಎನ್ನುತ್ತಾನೆ. ಶಂಸ್ ಅವನಲ್ಲಿದ್ದ ಪುಸ್ತಕಗಳನ್ನು ಸೆಳೆದು ಪಕ್ಕದಲ್ಲಿದ್ದ ಕೊಳದೊಳಕ್ಕೆ ಎಸೆಯುತ್ತಾನೆ. ತಕ್ಷಣವೇ ಅವುಗಳನ್ನು ರೂಮಿ ಎತ್ತಿಕೊಂಡು ನೋಡುತ್ತಾನೆ. ಒಂದೂ ನೆಂದಿರುವುದಿಲ್ಲ. 'ಏನು ಮಾಡಿದೆ' ಎಂದ ರೂಮಿಗೆ ಶಂಸ್, 'ಇದು ನಿಮ್ಮಂಥವರಿಗೆ ಅರ್ಥವಾಗುವುದಿಲ್ಲ ಎನ್ನುತ್ತಾನೆ'.

ಅಷ್ಟರಲ್ಲಿ ರೂಮಿ ಕಿಟಕಿಯಿಂದ ಸ್ವರ್ಗದ ಕಡೆಗೆ ಹೊಗೆ ಮೋಡ ನುಗ್ಗುತ್ತಿರುವುದು ಕಂಡು ಪ್ರಜ್ಞೆ ತಪ್ಪುತ್ತಾನೆ. ಒಂದು ಗಂಟೆಯ ನಂತರ ಎಚ್ಚರಗೊಂಡ ರೂಮಿಯೇ ದೈವ ಹೇಳಿದ್ದ ತನ್ನ ಸಂಗಾತಿ ಎಂಬುದನ್ನು ಶಂಸ್ ಅರಿಯುತ್ತಾನೆ. ಅಲ್ಲಿಂದ ಅವರ ಸ್ನೇಹ ಮುಂದುವರೆಯುತ್ತದೆ. ಶಂಸ್ ಎಂದರೆ ಸೂರ್ಯ ಎಂದರ್ಥ. ರೂಮಿ ಸೂರ್ಯನಂತಹ ಶಂಸ್‌ನ ಸಾಂಗತ್ಯದಲ್ಲಿ ಕಾವ್ಯ ಬರೆಯಲಾರಂಭಿಸುತ್ತಾನೆ.

ರೂಮಿ ತನ್ನ ಮಗಳನ್ನು ಶಂಸ್‌ಗೆ ಕೊಟ್ಟು ಮದುವೆ ಮಾಡಿ ಕೊನ್ಯಾದಲ್ಲಿಯೇ ಇರಿಸಿಕೊಳ್ಳುತ್ತಾನೆ. ಸಮಾಜದಲ್ಲಿ ಎತ್ತರದ ಸ್ಥಾನ ಗಳಿಸಿದ್ದ ರೂಮಿ ಎಲ್ಲವನ್ನು ತ್ಯಜಿಸಿ ಶಂಸ್‌ನ ಸಾಂಗತ್ಯಕ್ಕಾಗಿ ಹಪಹಪಿಸುತ್ತಾನೆ. ಈ ಸಂಬಂಧದಿಂದಾಗಿ ಕುಟುಂಬ ಹಾಗೂ ಸಮಾಜದ ವಿರೋಧವನ್ನು ಎದುರಿಸಬೇಕಾಗುತ್ತದೆ. ಅವನ ಅನುಯಾಯಿಗಳು ರೊಚ್ಚಿಗೇಳುತ್ತಾರೆ. ಒಂದು ದಿನ ಇಬ್ಬರೂ ಮಾತನಾಡುತ್ತಿದ್ದಾಗ ಯಾರೋ ಶಂಸ್‌ನನ್ನು ಹೊರಗೆ ಕರೆಯುತ್ತಾರೆ. ಹೀಗೆ ಹೊರಹೋದ ಶಂಸ್ ಮತ್ತೆ ಹಿಂತಿರುಗಿ ಬರುವುದಿಲ್ಲ. ಅವನನ್ನು ರೂಮಿಯ ಮಗನೇ ದೂರಮಾಡಿದನೆಂದು, ಹತ್ಯೆ ಮಾಡಲಾಯಿತೆಂದು ಹೇಳಲಾಗುತ್ತದೆ.

ಶಂಸ್‌ನ ಅಗಲಿಕೆಯಿಂದ ರೂಮಿ ಹುಚ್ಚನಂತೆ ಅಲೆಯುತ್ತಾನೆ. ಆ ಸಂದರ್ಭದಲ್ಲಿ ಬರೆದ ಕಾವ್ಯವೆಲ್ಲವೂ ವಿರಹಿಯನ್ನು ಕೂಡಿಕೊಳ್ಳುವ ಕಾತರತೆಯನ್ನು ತೋರುತ್ತದೆ. ಭಕ್ತನು ದೈವದ ಸಂಗಕ್ಕಾಗಿ ಕಾತರಿಸುವ ಕನವರಿಕೆಗಳಾಗಿ ಅವು ತೋರುತ್ತವೆ. ಈ ನಿರಂತರ ಹುಡುಕಾಟವೇ ಅವನು ಬರೆದ ಕಾವ್ಯ ದಿವಾನ್‌ಇ ಶಂಸ್‌ತಬ್ರೀಜಿ. ರೂಮಿಯ ಕಾವ್ಯದ ಮುಖ್ಯ ನೆಲೆ ಪ್ರೇಮ ಮತ್ತು ಅನುಭಾವ. ಈ ಅಲೆದಾಟದಲ್ಲಿ ಅವನ ಮನಸ್ಸು ಶಾಂತಗೊಳ್ಳುತ್ತಾ ಕಂಡುಕೊಂಡ ಸತ್ಯವೆಂದರೆ: 'ನಾನೇಕೆ ಅವನನ್ನು ಹುಡುಕಬೇಕು, ನಾನೇ ಅವನಾಗಿದ್ದೇನೆ, ಅವನ ಸತ್ವ ನನ್ನೊಳಗಿಂದ ಮಾತನಾಡುತ್ತಿದೆ, ನಾನು ನನಗಾಗಿ ಹುಡುಕುತ್ತಿದ್ದೇನೆ'.

ರೂಮಿ ಡಿಸೆಂಬರ್ 17, 1273ರಂದು ಕೋನ್ಯಾದಲ್ಲಿ ನಿಧನನಾದ. ಅವನ ಜೀವಿತದ ಅವಧಿಯಲ್ಲಿ ಕಂಡ ಬಾಲ್ಕ್, ಕೋನ್ಯಾ ಈಗ ಮೊದಲಿನ ಸ್ವರೂಪದಲ್ಲಿಲ್ಲ. ಅಫ್ಘಾನಿಸ್ತಾನ ಈಗ ಪ್ರಜೆಗಳ ನೆತ್ತಿಯ ಮೇಲೆ ಬಂದೂಕನ್ನಿರಿಸಿ ರಾಜ್ಯವಾಳುತ್ತಿದೆ. ಅವನ ಸಮಾಧಿ ಮೇಲೆ, 'ನಾವು ಸತ್ತ ಬಳಿಕ ನಮ್ಮ ಸಮಾಧಿಯನ್ನು ಮಣ್ಣುಭೂಮಿಯಲ್ಲಿ ಹುಡುಕಬೇಡಿ, ಅವುಗಳನ್ನು ಮಾನವನ ಎದೆಗೂಡೊಳಗೆ ಹುಡುಕಿ'.

■ **ಅಮೃತಮತಿ**

## ಮಾತೇ ಮುತ್ತು

- ಸಹಾಯ ಮಾಡುವ ಕೈಗಳು ಪ್ರಾರ್ಥನೆ ಮಾಡುವ ತುಟಿಗಳಿಗಿಂತ ಲೇಸು.

  —ಆರ್.ಜಿ. ಇಂಗರ್‌ಸಾಲ್
- ಕನ್ನಡ ಉಳಿಸಿ, ಕನ್ನಡ ಬೆಳೆಸಿ, ಕನ್ನಡವನೆ ಬಳಸಿ.

  —ಪು.ತಿ. ನರಸಿಂಹಾಚಾರ್
- ನಾಳೆ ಎಂಬುದು ಇಂದಿನ ಮತ್ತೊಂದು ಮುಖ ಅಷ್ಟೇ.

  —ವಿಲಿಯಂ ವಾರ್ಕರ್
- ಮಾತಿನ ಬಲೆ ತಿಳಿದವರು ಹೃದಯದ ತಕ್ಕಡಿಯಲ್ಲಿ ಮೊದಲು ತೂಗಿ ಅನಂತರ ಬಾಯಿ ಹೊರಗೆ ಹಾಕುವರು.

  —ಕಬೀರ್
- ಪ್ರಪಂಚ ಒಂದು ವಿಚಿತ್ರ ವ್ಯವಹಾರ.

  —ಮೋಲಿಯರ್
- ನಮ್ಮ ಮತ್ತು ಪ್ರಪಂಚದ ನಡುವೆ ಪುಸ್ತಕಗಳ ಅಡ್ಡಗೋಡೆ ಇದೆ.

  —ರವೀಂದ್ರನಾಥ ಟ್ಯಾಗೋರ್
- ಪುರುಷನನ್ನು ಅಪಮಾನ ಮಾಡುವುದು ಸಾಧಾರಣ ವಿಷಯ, ಸ್ತ್ರೀಯನ್ನು ಅಪಮಾನಪಡಿಸುವುದು ಬೆಂಕಿಯಲ್ಲಿ ಹಾರಿದಂತೆ.

  —ಪ್ರೇಮ್‌ಚಂದ್